ಓ.ಎಸ್. ನಂ. 241/2018
ಪಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕಃ 02.11.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಶ್ರೀ ಆರ್.ಹೆಚ್. ವಕೀಲರಿಂದ</u>**

**1.** ನಾನು ನೆಲಮಂಗಲ ಗ್ರಾಮ, ಮುದ್ದೇನಹಳ್ಳಿ ಪಾಳ್ಯದ ವಾಸಿ ಎಂದರೆ ಸರಿ. 1 ನೇ ಪ್ರತಿವಾದಿಯು ನನಗೆ ಮಧ್ಯವರ್ತಿ ಮುತ್ತುರಾಜ್‌ರವರ ಮುಖಾಂತರ ಪರಿಚಯವಾಗಿರುತ್ತಾರೆ. ನಾನು ಈಗ ಮೊಬೈಲ್ ರಿಪೇರಿ ಅಂಗಡಿ ಇಟ್ಟುಕೊಂಡಿರುತ್ತೇನೆ. ಮೊದಲು ಕಾರ್ ಚಾಲಕನಾಗಿದ್ದೆ. ದಾವಾ ಸ್ವತ್ತು ಮಾರಾಟಕ್ಕಿಟ್ಟಿರುವ ಬಗ್ಗೆ ನನ್ನ ತಮ್ಮ ಹಾಗೂ ಮುತ್ತುರಾಜ್‌ರವರು ನನಗೆ ತಿಳಿಸಿರುತ್ತಾರೆ. ದಾವಾ ಸ್ವತ್ತನ್ನು ನಾನು ಖುದ್ದಾಗಿ ನೋಡಿರುತ್ತೇನೆ. ದಾವಾ ಸ್ವತ್ತು 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದಂತಹ ಜಮೀನು ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬಕ್ಕೆ ದಾವಾ ಸ್ವತ್ತನ್ನು ಹೊರತು ಪಡಿಸಿ ಬೇರೆ ಸ್ವತ್ತುಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಬೇರೆ ಜಮೀನು ಇದೆ ಎಂದು ನನಗೆ ಹೇಳಿರುತ್ತಾರೆ.

**2.** ದಾವಾ ಸ್ವತ್ತಿನ ಕ್ರಯದ ಕರಾರು ಪತ್ರ ಮಾಡುವುದಕ್ಕಿಂತ 10 ದಿನಗಳ ಹಿಂದೆ ಮಾತು-ಕತೆಯಾಗಿರುತ್ತದೆ. ಕಂತೆವಡೇಯರಹಳ್ಳಿಯ ಒಂದು ದೇವಸ್ಥಾನದಲ್ಲಿ ಮಾತು-ಕತೆಯಾಗಿರುತ್ತದೆ. ಆ ದಿನ ನಾನು, ನನ್ನ ತಂದೆ, ನನ್ನ ತಮ್ಮ , ನನ್ನ ಸ್ನೇಹಿತರು, ಮಧ್ಯವರ್ತಿ ಹಾಗೂ ಪ್ರತಿವಾದಿಯರ ಮನೆಯವರು ಸೇರಿದ್ದೆವು. ದಾವಾ ಸ್ವತ್ತಿನ ದಾಖಲೆಗಳನ್ನು ಪ್ರತಿವಾದಿ ನನಗೆ ನೀಡಿರುತ್ತಾರೆ. 1,10,000/- ರೂ.ಗಳಿಗೆ ದಾವಾ ಸ್ವತ್ತಿನ ಮಾತು-ಕತೆಯಾಗಿರುತ್ತದೆ. ಕಂತೆವಡೇಯರಹಳ್ಳಿಯ ದೇವಸ್ಥಾನದಲ್ಲಿ ಲಿಖಿತವಾಗಿ ಯಾವುದೇ ಬರವಣಿಗೆ ಮಾಡಿರುವುದಿಲ್ಲ. ನೊಂದಣಾಧಿಕಾರಿಗಳ ಕಛೇರಿಯಲ್ಲಿ 70,000/- ಹಣವನ್ನು ನೀಡಿರುತ್ತೇವೆ. ಮುತ್ತುರಾಜ್ ಎಂಬುವವರು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ.

**3.** ನಾನು ನೆಲಮಂಗಲದಲ್ಲಿ ಕೈ-ಸಾಲ ನೀಡುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದರಿಂದ ಮುತ್ತುರಾಜ್‌ರವರ ಮುಖಾಂತರ ಹಣವನ್ನು ಕೇಳಿದ್ದು ಸದರಿ ಹಣದ ಭದ್ರತೆಗಾಗಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಣದ ಭದ್ರತೆಗಾಗಿ ಆಧಾರ ಪತ್ರವನ್ನು ಮಾಡಿಕೊಡುವ ಬದಲಾಗಿ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ನೀಡಿದ್ದ ಲೀಗಲ್ ನೋಟೀಸ್‌ಗೆ ಪ್ರತಿವಾದಿ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ

ಸರಿ. ಪ್ರತ್ಯುತ್ತರದಲ್ಲಿ ನಾವು ಯಾವುದೇ ಕ್ರಯದ ಕರಾರು ಮಾಡಿಕೊಟ್ಟಿರುವುದಿಲ್ಲ ಕೈಸಾಲವನ್ನಾಗಿ ಪಡೆದ 70,000/- ರೂ. ಹಣವನ್ನು ಕೊಡಲು ತಯಾರಿದ್ದೇವೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗ ಸುಮಾರು 25,00,000/- ರೂ. ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಗಳು ಕೈಸಾಲವನ್ನಾಗಿ ಪಡೆದ 70,000/- ರೂ. ಹಣವನ್ನು ಕೊಡಲು ತಯಾರಿದ್ದಾರೆ ಎಂದರೆ ಸಾಕ್ಷಿಯು ನಾನು ಕ್ರಯದ ಕರಾರು ಪತ್ರಕ್ಕೆ ಹಣವನ್ನಾಗಿ ಕೊಟ್ಟಿರುತ್ತೇನೆ ಎಂದು ನುಡಿದಿದ್ದಾರೆ.

**4.** ದಾವಾ ಸ್ವತ್ತನ್ನು ಮಾರಾಟ ಮಾಡಲು ಪ್ರತಿವಾದಿಗಳಿಗೆ ಯಾವುದೇ ಇಚ್ಛೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಪಡೆದುಕೊಳ್ಳುವ ಉದ್ದೇಶದಿಂದ ನಾನು ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**